## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

ಸಂ:ಕಂ:ಹ.ಬ.ವಿವಾದ: 68/2014-15 ದಿ: 27-05-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ದಣ್ಣೆ ಯಲ್ಲಪ್ಪ ತಂದೆ: ಲೇಟ್ ದಣ್ಣೆ ಕಾಳಪ್ಪ
ಕೆ.ಬೆಳಗಲ್ ಗ್ರಾಮ, ಸಿರುಗುಪ್ಪ ತಾಲೂಕ
2) ದಣ್ಣೆ ಅಂಬಣ್ಣಾ ತಂದೆ: ಲೇಟ್ ದಣ್ಣೆ ಮುಕ್ಕಣ್ಣಾ
ಕೆ. ಬೆಳಗಲ್ ಗ್ರಾಮ , ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

ಶಿವಮ್ಮ
ತಂದೆ: ದಣ್ಣೆ ಪೊಂಪಣ್ಣಾ
ಕೆ.ಬೆಳಗಲ್ ಗ್ರಾಮ
ಸಿರುಗುಪ್ಪ ತಾಲೂಕ

**ವಿವಾದಿತ ಜಮೀನಿನ ವಿವರ**

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಡು ಸಂಖ್ಯೆ |
|---|---|---|---|---|
| ಕಂಚಿಗಾರ ಬೆಳಗಲ್ ಗ್ರಾಮ | 293/C/1ಇ | 0-50<br>0-50 | H157/2013-14 | 358/2013-14 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಕೆ. ಬೆಳಗಲ್ ಗ್ರಾಮದ ಸ.ನಂ. 293/C/1**ಇ ವಿಸ್ತೀರ್ಣ 0-50 ಸೆಂಟ್ಸ್ ಮತ್ತು 0-50 ಎಕರೆ ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ** ರಂದು **ದಣ್ಣೆ ಯಲ್ಲಪ್ಪ ತಂದೆ:ದಣ್ಣೆ ಕಾಳಪ್ಪ ಮತ್ತು ದಣ್ಣೆ ಅಂಬಣ್ಣಾ ತಂದೆ: ಲೇಟ್ ದಣ್ಣೆ ಮುಕ್ಕಣ್ಣಾ ಕೆ.ಬೆಳಗಲ್ ಗ್ರಾಮ ಇವರ ಹೆಸರಿನಲ್ಲಿ** ಖಾತೆ ಬದಲಾವಣೆ ಮಾಡಲು ನಮೂನೆ -21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ **ಶಿವಮ್ಮ ತಂದೆ: ದಣ್ಣೆ ಪೊಂಪಣ್ಣಾ , ಕೆ.ಬೆಳಗಲ್ ಗ್ರಾಮ ಇವರು ದಿ:16-6-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:14-8-2015,24-10-2015, 08-3-2016, 11-3-2016,28-3-2016, 29-4-2016 ಮತ್ತು 27-5-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು

ವಾದಿಗಳಾದ ದಣ್ಣಿ ಯಲ್ಲಪ್ಪ ತಂದೆ: ಲೇಟ್ ದಣ್ಣಿ ಕಾಳಪ್ಪ ಕೆ.ಬೆಳಗಲ್ ಗ್ರಾಮ ಮತ್ತು ದಣ್ಣಿ ಅಂಬಣ್ಣ ತಂದೆ: ಲೇಟ್ ದಣ್ಣಿ ಮುಕ್ಕಣ್ಣ, ಕೆ.ಬೆಳಗಲ್‌ಗ್ರಾಮ ಇವರು ಕೆ.ಬೆಳಗಲ್‌ಗ್ರಾಮದ ಸ.ನಂ. **293/C/1**ಆ ವಿಸ್ತೀರ್ಣ 0–50 ಸೆಂಟ್ಸ್ ಮತ್ತು 0–50 ಎಕರೆ ಜಮೀನು ದಣ್ಣಿ ಪೊಂಪಣ್ಣ ತಂದೆ: ಲಿಂಗಣ್ಣ ಮತ್ತು ದಣ್ಣಿ ಈರಣ್ಣ ತಂದೆ: ದಣ್ಣಿ ಮುಕ್ಕಣ್ಣ ಇವರ ಹೆಸರಿಗೆ 0–50 ಸೆಂಟ್ಸ್ 0–50 ಸೆಂಟ್ಸ್ ಇದ್ದು ಪೋತಿ ಆಧಾರದ ಮೇರೆಗೆ ದಣ್ಣಿ ಯಲ್ಲಪ್ಪ ಇವರಿಗೆ 0–50 ಸೆಂಟ್ಸ್ ಮತ್ತು ದಣ್ಣಿ ಅಂಬಣ್ಣ ಇವರಿಗೆ 0–50 ಸೆಂಟ್ಸ್ ಜಮೀನು ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ಶ್ರೀಮತಿ: ಶಿವಮ್ಮ ತಂದೆ: ದಣ್ಣಿ ಪೊಂಪಣ್ಣ ಕೆ.ಬೆಳಗಲ್ ಗ್ರಾಮ ಇವರು ತಮಗೂ ಪಾಲು ಬರಬೇಕೆಂಬ ಕಾರಣಕ್ಕೆ ದಿ:16–6–2014 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಪರಿಷ್ಕಾರ ಪ್ರಕಾರ ಇವರಿಗೆ ಕೆ. ಬೆಳಗಲ್ ಗ್ರಾಮದ ಸ.ನಂ. 436ಬಿ ಪೈಕಿ 3–00 ಎಕರೆ ಮತ್ತು 193 ಸಿ ಪೈಕಿ 0–56 ಸೆಂಟ್ಸ್ ಜಮೀನು ಬಿಟ್ಟುಕೊಡುವುದಾಗಿ ಪರಿಷ್ಕಾರ ಮಾಡಿದ ಪ್ರಕಾರ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದಿರುವುದಾಗಿ ಕೆ.ಬೆಳಗಲ್ ಗ್ರಾಮದ ಸ.ನಂ: 293/**C1**ಆ ವಿಸ್ತೀರ್ಣ 0–50 ಮತ್ತು 0–50 ಸೆಂಟ್ಸ್ ಜಮೀನು ನಮ್ಮ ಇಬ್ಬರ ಹೆಸರಿನಲ್ಲಿ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು

ಪ್ರತಿವಾದಿಗಳಾದ ಶಿವಮ್ಮ ತಂಧೆ: ದಣ್ಣಿ ಪೊಂಪಣ್ಣ ಕೆ.ಬೆಳಗಲ್‌ಗ್ರಾಮ ಇವರು ಕೆ.ಬೆಳಗಲ್ ಗ್ರಾಮದ ಸ.ನಂ. **293/C/1**ಆ ವಿಸ್ತೀರ್ಣ 0–50 ಸೆಂಟ್ಸ್ ಮತ್ತು 0–50 ಎಕರೆ ಜಮೀನು ದಣ್ಣಿ ಯಲ್ಲಪ್ಪ ಮತ್ತು ದಣ್ಣಿ ಅಂಬಣ್ಣ ನವರ ಹೆಸರಿಗೆ ಪಟ್ಟ ವರ್ಗಾವಣೆ ಸಮಯದಲ್ಲಿ ನಾನು ದಿನಾಂಕ: 16–6–2014 ರಂದು ತಕರಾರು ಅರ್ಜಿ ಸಲ್ಲಿಸಿದ್ದು ಈಗ ದೊಡ್ಡ ಮನುಷ್ಯರ ಪರಿಷ್ಕಾರ ಪ್ರಕಾರ ಇವರಿಗೆ ಕೆ. ಬೆಳಗಲ್ ಗ್ರಾಮದ ಸ.ನಂ. 436ಬಿ ಪೈಕಿ 3–00 ಎಕರೆ ಮತ್ತು 193 ಸಿ ಪೈಕಿ 0–56 ಸೆಂಟ್ಸ್ ಜಮೀನು ಬಿಟ್ಟುಕೊಡುವುದಾಗಿ ಪರಿಷ್ಕಾರ ಮಾಡಿದ ಪ್ರಕಾರ ನನ್ನ ತಕರಾರು ಅರ್ಜಿಯನ್ನು ಹಿಂದಕ್ಕೆ ಪಡೆದು ದಣ್ಣಿ ಯಲ್ಲಪ್ಪ ಮತ್ತು ದಣ್ಣಿ ಅಂಬಣ್ಣ ಇವರಿಗೆ ತಲಾ 0–50 ಸೆಂಟ್ಸ್ ಜಮೀನು ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕೆ. ಬೆಳಗಲ್ ಗ್ರಾಮದ ಸ.ನಂ. **293/C/1**ಆ ವಿಸ್ತೀರ್ಣ 0–50 ಸೆಂಟ್ಸ್ ಮತ್ತು 0–50 ಎಕರೆ ಜಮೀನು ಪೋತಿ ವಾರಸತ್ವ ಪ್ರಕಾರ ದಣ್ಣಿ ಯಲ್ಲಪ್ಪ ತಂದೆ: ಲೇಟ್ ದಣ್ಣಿ ಕಾಳಪ್ಪ ಹೆಸರಿಗೆ 0–50 ಸೆಂಟ್ಸ್ ಮತ್ತು ದಣ್ಣಿ ಅಂಬಣ್ಣ ತಂದೆ: ದಣ್ಣಿ ಮುಕ್ಕಣ್ಣ ಲೇಟ್ ಇವರ ಹೆಸರಿಗೆ 0–50 ಸೆಂಟ್ಸ್ ಜಮೀನು ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ: 27–05–2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು
ನಾಡ ಕಛೇರಿ,
... ಸಿರುಗುಪ್ಪ ತಾ.

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. [illegible]